## ಟೆಂಡರ್ ಷರತ್ತುಗಳು

1. ಈ ಟೆಂಡರ್‌ದಲ್ಲಿ ನಮೂದಿಸಿದ ಕಾಮಗಾರಿಗಳನ್ನು ಕೈಗೊಂಡ ಬಗ್ಗೆ ಗುತ್ತಿಗೆದಾರರು ಅದೇ ತರಹದ ಕಾಮಗಾರಿಯನ್ನು ಪೂರ್ಣಗೊಳಿಸಿದ ಪ್ರಪತ್ರ ಪೂರೈಸುವುದು.
2. ಯಾವ ಕಾರಣವನ್ನು ನೀಡದೇ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಟೆಂಡರ್ ಸ್ವೀಕರಿಸುವದನ್ನು ಈ ಕೆಳ ಸಹಿದಾರರು ಕಾಯ್ದಿರಿಸಿಕೊಂಡಿದ್ದಾರೆ.
3. ಅರಣ್ಯೀಕರಣ ಕಾಮಗಾರಿಗಳಿಗೆ ಇಲಾಖೆಯ ಅಧಿಕಾರಿಗಳು ಸ್ಥಳದಲ್ಲಿಯೇ ನೀಡುವ ನಿರ್ದೇಶನಗಳಿಗೆ ಒಳಪಟ್ಟಿರುತ್ತದೆ. ಮತ್ತು ಕಾಲಕಾಲಕ್ಕೆ ನಿರ್ದೇಶಿಸುವ ಕಾಮಗಾರಿಗಳನ್ನು ನಿರ್ವಹಿಸಬೇಕಾಗುತ್ತದೆ. ಆಯಾ ವರ್ಷದ ಕಾಮಗಾರಿಗಳಿಗೆ ಇಲಾಖೆಯ ಎಸ್.ಎಸ್.ಆರ್ ದರಗಳಗನುಗುಣವಾಗಿ ಬದಲಾವಣೆ ಆಗುವ ನಿಬಂಧನೆಗಳಿಗೆ ಬದ್ಧರಾಗಿರಬೇಕು.
4. ಈ ಟೆಂಡರ್ ಪ್ರಟಣೆಯಲ್ಲಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳಲ್ಲಿ ಈಗಾಗಲೇ ಋತುಮಾನಕ್ಕನುಸಾರವಾಗಿ ಇಲಾಖೆ ಮೂಲಕ ಕೈಗೊಂಡಿರುವ ಎಲ್ಲಾ ಕಾಮಗಾರಿಗಳನ್ನು ಹೊರತುಪಡಿಸಿ ಬಾಕಿ ಉಳಿದ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳಬೇಕಾಗಿರುತ್ತದೆ.
5. ಸರಕಾರದ ಆದೇಶ ಸಂಖ್ಯೆ:ಸಂವ್ಯಶಾಇ 22 ಶಾಸನ 2016 ಬೆಂಗಳೂರು ದಿನಾಂಕ: 29-06-2017 ರ ಅನುಸಾನ ಶೇಕಡಾ 17.15 ರಷ್ಟು ಸಂಖ್ಯೆಯನ್ನು ಮೀರದಂತೆ ಅನುಸೂಚಿತ ಜಾತಿಗಳ ವರ್ಗಕ್ಕೆ ಸೇರಿದವರಿಗೆ ಟೆಂಡರುದಾರರುಗಳ ಪೈಕಿ ಮಾತ್ರ ಟೆಂಡರ್‌ನ್ನು ನೀಡಲಾಗುವುದು ಮತ್ತು ಅಂತಹ ಕಾಮಗಾರಿಗಳ ಶೇಕಡಾ 6.95 ರಷ್ಟು ಸಂಖ್ಯೆಯನ್ನು ಮೀರದಂತೆ ಅನುಸೂಚಿತ ಪಂಗಡಗಳ ವರ್ಗಕ್ಕೆ ಸೇರಿದವರಿಗೆ ಟೆಂಡರುದಾರರುಗಳ ಪೈಕಿ ಮಾತ್ರ ಟೆಂಡರ್‌ನ್ನು ನೀಡಲಾಗುವುದು.
6. ಈ ಗುತ್ತಿಗೆಯಲ್ಲಿ ನಿಗಧಿಪಡಿಸಿದ ಕೆಲಸ ಕಾರ್ಯಗಳು ವೈಜ್ಞಾನಿಕ ಅರಣ್ಯೀಕರಣ ಕೆಲಸಗಳಾಗಿದ್ದು ಅವುಗಳನ್ನು ನಿರ್ವಹಿಸಲು ಕೆಲವೊಂದು ಅನುಭವದ ಅವಶ್ಯಕತೆ ಇರುವ ಕಾರಣ ಈ ಕೆಳಗಿನ ಯಾವುದಾದರೂ ಒಂದು ಶರತ್ತನ್ನು ಹೊಂದಿರುವಂತಹ ಗುತ್ತಿಗೆದಾರರನ್ನು ಮಾತ್ರ ಪರಿಗಣಿಸಲಾಗುವುದು.
   - ಅ) ಅರಣ್ಯೀಕರಣ ಕೆಲಸಗಳಲ್ಲಿ ಕನಿಷ್ಠ 5 ವರ್ಷ ಅನುಭವ ಹೊಂದಿರುವ ಬಗ್ಗೆ ಹಾಗೂ ಅರಣ್ಯ ಕಾಮಗಾರಿಗಳನ್ನು ಮಾಡಿದ ಕುರಿತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಪ್ರಮಾಣ ಪತ್ರ ಪಡೆದವರಾಗಿರಬೇಕು.
   - ಆ) ಕಳೆದ 3 ವರ್ಷಗಳು ಸತತವಾಗಿ ಅರಣ್ಯ ಗುತ್ತಿಗೆದಾರರೆಂದು ನೋಂದಾಯಿತರಾಗಿದ್ದು ನೋಂದಣಿ ಚಾಲ್ತಿಯಲ್ಲಿದ್ದು ಅಂಥವರ ಹೆಸರಿನಲ್ಲಿ ಅರಣ್ಯೀಕರಣ ಬಿಲ್ಲುಗಳು ಕನಿಷ್ಠ 1.00 ಲಕ್ಷ ಅಥವಾ ಈ ಟೆಂಡರ್ ಹಾಕುವ ಕಾಮಗಾರಿಯ ಶೇಕಡಾ 10% ರಷ್ಟು (ಯಾವುದು ಹೆಚ್ಚು ಅದು) ಹಣ ಬಟವಡೆ ಆಗಿದ್ದ ಪಕ್ಷದಲ್ಲಿ ಅದನ್ನು ಸಹ ಅನುಭವ ಎಂದು ಪರಿಗಣಿಸಲಾಗುವುದು.
7. ತಾಂತ್ರಿಕ ಬಿಡ್‌ನಲ್ಲಿ ಅಪಲೋಡ ಮಾಡಬೇಕಾದ ಅವಶ್ಯಕ ದಾಖಲೆಗಳು.
   - ಅ) ಟೆಂಡರ ಹಾಕುವ ಮೊದಲು ಅರಣ್ಯ ಗುತ್ತಿಗೆದಾರರೆಂದು ನೋಂದಣಿ ಮಾಡಿದ್ದಕ್ಕೆ ಚಾಲ್ತಿಯಲ್ಲಿದ್ದ ಪ್ರಮಾಣ ಪತ್ರವನ್ನು ಅಪ್‌ಲೋಡ ಮಾಡಬೇಕು.
   - ಆ) ಆದಾಯ ತೆರಿಗೆ 1967 ನೇದ್ದರ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಆದಾಯ ತೆರಿಗೆ ಇಲಾಖೆಯಿಂದ ಪಡೆದ TAN/PAN ನಂಬರ ಹೊಂದಿದವರಾಗಿರಬೇಕು. ಅದರ ಧೃಢಿಕೃತ ಪ್ರತಿಯನ್ನು ಅಪ್‌ಲೋಡ ಮಾಡಬೇಕು (ಪ್ರಸಕ್ತ ಸಾಲಿನಲ್ಲಿ ಚಾಲ್ತಿ ಇರುವ)
   - ಇ) ಕರ್ನಾಟಕ ವ್ಯಾಟ್ (KVAT) ನಿಯಮಾವಳಿಗಳ ಪ್ರಕಾರ ಟಿನ್ (TIN) ನಂಬರನ್ನು ಪಡೆದವರಾಗಿರಬೇಕು. ಓನ್ (TIN) ನಂತರ ಪಡೆದ ಪ್ರಮಾಣ ಪತ್ರದ ಪ್ರತಿಯನ್ನು /ಜಿ.ಎಸ್.ಟಿ ನಂ. ಪ್ರಮಾಣ ಪತ್ರದ ಪ್ರತಿಯನ್ನು ಟೆಕ್ನಿಕಲ್ ಬಿಡ್‌ನಲ್ಲಿ ಅಪಲೋಡ ಮಾಡಬೇಕು.

ಈ) ಅರಣ್ಯೀಕರಣ ಕೆಲಸಗಳನ್ನು ಋತುಮಾನಕ್ಕೆ ತಕ್ಕಂತೆ ನಿರ್ವಹಿಸಬೇಕಾಗಿದ್ದು ಗುತ್ತಿಗೆದಾರರು ಕನಿಷ್ಠ ರೂ. 100000.00 ಅಥವಾ ಟೆಂಡರ್ ಹಾಕುವ ಕಾಮಗಾರಿಯ ಮೊತ್ತದ ಶೇಕಡಾ 10% ರಷ್ಟು ಹಣ ಬ್ಯಾಂಕ ಬ್ಯಾಲೆನ್ಸ ಹೊಂದಿರಬೇಕು (ಯಾವುದು ಹೆಚ್ಚು ಅದು). ಹಾಗೂ ಬ್ಯಾಂಕನಿಂದ ಸಾಲ ಪಡೆಯುವ /ತಿರುವಳಿಗೊಳಿಸುವ ಸಾಮರ್ಥ್ಯವನ್ನು ಗುತ್ತಿಗೆದಾರರು ಹೊಂದಿರಬೇಕು. ಆ ಸಂಬಂಧ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ ಅಥವಾ ಶೆಡ್ಯೂಲ್ಡ್ ಬ್ಯಾಂಕನವರಿಂದ ಖಾತ್ರಿ ಪ್ರಮಾಣ ಪತ್ರ ಹೊಂದಿರತಕ್ಕದ್ದು ಹಾಗೂ ಪ್ರತಿಯನ್ನು ಲಗತ್ತಿಸುವುದು.

ಉ) ಅರಣ್ಯೀಕರಣ ಕೆಲಸಗಳನ್ನು ಮಾಡಲು ಹೆಚ್ಚಾಗಿ ನುರಿತ ಕೆಲಸಗಾರರ ಅವಶ್ಯಕತೆ ಇರುವ ಕಾರಣ ಗುತ್ತಿಗೆದಾರರು ಲೇಬರ್ ಆ್ಯಕ್ಟ ನಿಯಮಾವಳಿಗಳ ಹಾಗೂ ಇಪಿಎಫ್ ಕಾಯ್ದೆ ಅನುಸಾರ ನೋಂದಾಯಿಸಿದ ಕೂಲಿಕಾರರ ವಿವರವನ್ನು ಸಲ್ಲಿಸುವುದು ಹಾಗೂ ಲೇಬರ್ ಆ್ಯಕ್ಟ ನಿಯಮಾವಳಿಗಳ ಅನುಸಾರ ಪ್ರತಿ ಕೂಲಿಕಾರರು ಕಾರ್ಮಿಕ ವಿಮೆ ಹೊಂದಿರಬೇಕು ಮತ್ತು ಪ್ರತಿ ಗುತ್ತಿಗೆದಾರರು ವೈಯಕ್ತಿಕ ಪಿ.ಎಫ್ ಕೂಡ ಹೊಂದಿರುವ ಬಗ್ಗೆ ದಾಖಲೆಗಳನ್ನು ಟೆಕ್ನಿಕಲ್ ಲಕೋಟೆಯಲ್ಲಿ ಇಡುವುದು ಮತ್ತು ಇಪಿಎಫ್ ಹಾಗೂ ಇ.ಎಸ್.ಐ ಅನ್ವಯವಾಗುತ್ತಿದ್ದಲ್ಲಿ ಅದರಂತೆ ನೋಂದಣಿ ಮಾಡಿಕೊಂಡು ಕೆಲಸ ನಿರ್ವಹಿಸಬೇಕಾಗುತ್ತದೆ. ಕಾಮಗಾರಿ ಕೈಗೊಳ್ಳುವಾಗ ಏನಾದರೂ ಪ್ರಾಣ ಹಾನಿ ಅಥವಾ ಅವಗಢಗಳು ಸಂಭವಿಸಿದ್ದಲ್ಲಿ ಅದರ ಆರ್ಥಿಕ ಹಾಗೂ ಭೌತಿಕ ಹ್ರೆಣೆ ಗುತ್ತಿಗೆದಾರರದ್ದಾಗಿರುತ್ತದೆ.

ಊ) ಗುತ್ತಿಗೆದಾರರು ಡಿ.ಐ.ಟಿ ಡೋಜರ್, ಹಿತಾಚಿ ಹಾಗೂ ಜೆ.ಸಿ.ಬಿ ಟಿಪ್ಪರ, ಟ್ರಾಕ್ಟರ್ ಮಾಲೀಕತ್ವ ಮುಂತಾದ ಯಂತ್ರಗಳನ್ನು ಹೊಂದಿರುವ ಬಗ್ಗೆ ನಮೂದಿಸಿ ವಾಹನಗಳ ನೊಂದಣಿ ಪತ್ರಗಳನ್ನು ಟೆಕ್ನಿಕಲ್ ಬಿಡ್‌ನಲ್ಲಿ ಅಪ್‌ಲೋಡ ಮಾಡಬೇಕು. ಸಸಿಗಳನ್ನು ಬೆಳೆಸಲು ಆಯ್ಕೆ ಮಾಡಿದ ಸ್ಥಳ/ಭೂಮಿಯ ಟೆಂಡರ್‌ದಾರರ ಹೆಸರಿನಲ್ಲಿರುವ ದಾಖಲಾತಿ ಲಗತ್ತಿಸಬೇಕು. ಅಥವಾ ಬೇರೆಯವರ ಸ್ಥಳದಲ್ಲಿ ಸಸಿಗಳನ್ನು ಬೆಳೆಸುವದಿದ್ದರೆ ಸಂಬಂದಿಸಿದ ಭೂಮಾಲಿಕರಿಂದ ದಿನಾಂಕ: 31.03.2025 ರ ವರೆಗೆ ಸಸಿಗಳನ್ನು ಬೆಳೆಸಲು ಸದರಿ ಸ್ಥಳವನ್ನು ಉಪಯೋಗಿಸುವುದಾಗಿ ಒಪ್ಪಂದ ಮಾಡಿಕೊಂಡ ಕರಾರು ಪ್ರತಿ ಹಾಗೂ ಸ್ಥಳದ ನಕಾಶೆ, ವಿವರಗಳು.

ಋ) ವಿಳಾಸ ಖಾತ್ರಿಗಾಗಿ ಕಳೆದ ಎರಡು ತಿಂಗಳುಗಳಲ್ಲಿ ಪಡೆದಂತಹ ಟೆಲಿಫೋನ ಬಿಲ್ ಅಥವಾ ಚುನಾವಣಾ ಗುರುತಿನ ಚೀಟಿ ಅಥವಾ ಪಡಿತರ ಚೀಟಿ ಅಥವಾ ಬ್ಯಾಂಕಿನಿಂದ ಪಡೆದಂತಹ ಪಾಸ ಬುಕ್ ಅಥವಾ ಸ್ಥಳೀಯ ನಗರಸಭೆ/ಪುರಸಭೆ/ಗ್ರಾಮ ಪಂಚಾಯತ/ಕಂದಾಯ ಇಲಾಖೆಯಿಂದ ಪಡೆದಂತಹ ವಿಳಾಸ ಹೊಂದಿದ ಪ್ರಮಾಣ ಪತ್ರ ಹೊಂದಿರಬೇಕು.

೮. ಟೆಂಡರದಾರರು ಪ್ರತಿ ಯುನಿಟ್‌ಗೆ ಪ್ರತ್ಯೇಕ ಟೆಂಡರ ಸಲ್ಲಿಸಬೇಕು. ಹಾಗೂ ದರವನ್ನು ಪ್ರತಿ ಯುನಿಟ್‌ಗೆ ನಿಗದಿಪಡಿಸಿದ ಅಂದಾಜು ಮೊತ್ತದ ಆಧಾರದ ಮೇಲೆ ನಮೂದಿಸಬೇಕು. ಇಲ್ಲಿ ಒಂದು ಯುನಿಟ್ ಅಂದರೆ ಒಂದು ವಲಯದಲ್ಲಿಯ ನೆಡುತೋಪು ನಿರ್ಮಾಣ, ಆ ಕ್ಷೇತ್ರಕ್ಕೆ ಸಂಬಂಧಿಸಿದ ಅಂದಾಜು ಪತ್ರಿಕೆಯಲ್ಲಿ ನಿಗಧಿಪಡಿಸಿದ ಎಲ್ಲಾ ಕೆಲಸಗಳನ್ನು ಕಾಲಮಾನ ಮಿತಿಯೊಳಗೆ ನಿರ್ವಹಿಸುವುದು ಹಾಗೂ ತಮ್ಮ ದರಗಳನ್ನು ಪ್ರತಿ ಅಂದಾಜು ಪತ್ರಿಕೆಯ ಮೊತ್ತಕ್ಕೆ ಕಡಿಮೆ ಆಥವಾ ಹೆಚ್ಚಿನ ಪ್ರತಿಶತದಲ್ಲಿ ದರಗಳನ್ನು ನೀಡಬೇಕು. ಒಂದು ವೇಳೆ ಕಾಲಮಾನದ ಪ್ರಕಾರ ಎಲ್ಲ ಕಾಮಗಾರಿಗಳನ್ನು ನಿರ್ವಹಿಸದಿದ್ದಲ್ಲಿ ಅಂತವರ ಮೇಲೆ ಕಾನೂನು ಪ್ರಕಾರ ಕ್ರಮ ಜರುಗಿಸಲಾಗುವುದು.

೦9. ಅರಣ್ಯೀಕರಣ ಕೆಲಸಗಳು ಋತುಮಾನಕ್ಕೆ ತಕ್ಕಂತೆ ಪೂರ್ಣಗೊಳಸಬೇಕಾಗಿರುವ್ಯದರಿಂದ ಇಂತಹ ಸಂದರ್ಭಗಳಲ್ಲಿ ಇಲಾಖೆ ವತಿಯಿಂದ ಕಾಮಗಾರಿ ಕೈಗೊಂಡಲ್ಲಿ ಮುಂದುವರೆದ ಕಾಮಗಾರಿಗಳನ್ನು ಮಾತ್ರ ಕೈಗೊಂಡು ಪೂರ್ಣಗೊಳಸಲು ಒಪ್ಪಿಗೆ ಇರಬೇಕು ಮತ್ತು ಅದೇ ರೀತಿ ಕರಾರು ಒಪ್ಪಂದ ಮಾಡಿಕೊಳ್ಳುವುದು.

10. ಟೆಂಡರ ಸಲ್ಲಿಸುವ ಗುತ್ತಿಗೆದಾರರು ಆಯಾ ಯುನಿಟ್ ಮುಂದೆ ಸ್ರಂಸಿದ ಮೊತ್ತದ ಇಡಗಂಟನ್ನು (ಇ.ಎಂ.ಡಿ) ಆಯಾ ಯುನಿಟಗಳಿಗೆ ಪ್ರತ್ಯೇಕವಾಗಿ ಸಲ್ಲಿಸಬೇಕು.

11. ಕರಾರು ಒಪ್ಪಂದ ಮಾಡಿಕೊಂಡ ಗುತ್ತಿಗೆದಾರರು ಕೆಲಸದ ಆದೇಶ ಕೊಟ್ಟ ಕೂಡಲೇ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳ ಮಾರ್ಗದರ್ಶನದಲ್ಲಿ ನೆಡುತೋಪು ಕೆಲಸಗಳನ್ನು ಋತುಮಾನದ ಕಾಲಮಿತಿಯಂತೆ ಪ್ರಾರಂಭಿಸಿ ನಿರ್ವಹಿಸುವುದು. ಯಾವುದೇ ಕಾರಣಕ್ಕೂ ಕಾಲಮಿತಿಯನ್ನು ಮುಂದುವರೆಸಲಾಗುವುದಿಲ್ಲ.

12. ಈ ಟೆಂಡರಿನಲ್ಲಿ ಇಲಾಖೆಯ ವಿವಿಧ ಯೋಜನೆಗಳಡಿಯಲ್ಲಿ ಕಾಮಗಾರಿಗಳನ್ನು ಅಂದಾಜು ಪಟ್ಟಿಯಲ್ಲಿ ನಮೂದಿಸಿದ ನಿರ್ಧಿಷ್ಟಗಳ (Specification) ಪ್ರಕಾರ ನಿರ್ವಹಿಸಬೇಕು ಹಾಗೂ ಇಲಾಖೆಯು ನಿಗಧಿಪಡಿಸಿದ Species and planting techniques models ರ ಅನುಸಾರ ಇರಬೇಕಾಗುತ್ತದೆ ಹಾಗೂ ವಲಯ ಅರಣ್ಯ ಅಧಿಕಾರಿಗಳ ವರದಿಯನುಸಾರ ಬದುಕುಳಿದ ಸಸಿಗಳ ಆಧಾರದ ಮೇಲೆ ಅನುದಾನ ಬಿಡುಗಡೆ ಮಾಡಲಾಗುವುದು.

13. ಅರಣ್ಯೀಕರಣ ಕಾಮಗಾರಿಗಳಿಗೆ ಹಣವನ್ನು ಏಕಕಾಲಕ್ಕೆ ಪೂರ್ಣವಾಗಿ ಪಾವತಿ ಮಾಡಲಾಗುವುದಿಲ್ಲ. ಪೂರ್ಣಗೊಂಡ ಕೆಲಸಗಳಿಗೆ ಕಾಲಕಾಲಕ್ಕೆ ಆಯಾ ಕ್ಷೇತ್ರಗಳಿಗೆ ಸಂಬಂಧಿಸಿದ ಉಪ ವಲಯ ಅರಣ್ಯ ಅಧಿಕಾರಿಗಳು, ವಲಯ ಅರಣ್ಯ ಅಧಿಕಾರಿಗಳು ಹಾಗೂ ಸಂಬಂಧಿಸಿದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರ ಪರಿಶೀಲನೆ ಹಾಗೂ ಧೃಢೀಕರಣವನ್ನು ಕರ್ನಾಟಕ ಅರಣ್ಯ ಲೆಕ್ಕ ಸಂಹಿತೆ ಪ್ರಕಾರ ಮಾಡಿಸುವುದು ಈ ಮೇಲೆ ತಿಳಿಸಿದ ರೀತಿಯಲ್ಲಿ ಪೂರ್ಣಗೊಂಡ ಹಾಗೂ ಪರಿಶೀಲನೆ ಮಾಡಿದ ಕೆಲಸಗಳಿಗೆ ಬಿಲ್ಲನ್ನು ತಯಾರಿಸಿ ಸಂಬಂಧಪಟ್ಟ ವಲಯ ಅರಣ್ಯ ಅಧಿಕಾರಿಗಳು ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ಸಲ್ಲಿಸುವುದು. ಇಂತಹ ಬಿಲ್ಲುಗಳನ್ನು ಸಂಬಂಧಿಸಿದ ಯೋಜನೆ ಅಡಿಯಲ್ಲಿ ಪ್ರತ್ಯಯ ಪತ್ರದ ಲಭ್ಯತೆ ಅನುಗುಣವಾಗಿ ಚಾಲ್ತಿಯಲ್ಲಿರುವ ಎಲ್ಲಾ ತೆರಿಗೆಗಳನ್ನು (ರಾಜ್ಯ ಮತ್ತು ಕೇಂದ್ರ ಸರಕಾರ) ಕಟಾವಣೆ ಮಾಡಿ ಬಟವಡೆಯನ್ನು ಮಾಡಲಾಗುವುದು. ಒಂದು ವೇಳೆ ಕಾಮಗಾರಿಯಲ್ಲಿ ವ್ಯತ್ಯಾಸ ಕಂಡು ಬಂದಲ್ಲಿ ಹಣ ಸರಕಾರಕ್ಕೆ ಮುಟ್ಟಗೋಲು ಹಾಕಿಕೊಳ್ಳಲಾಗುವುದು.

14. ಅಂದಾಜು ಪತ್ರಿಕೆಯಲ್ಲಿ ನಿಗದಿಪಡಿಸಿದ ಯಾವುದೇ ಕೆಲಸಗಳನ್ನು ಕೈಬಿಟ್ಟಲ್ಲಿ ಇಡೀ ಟೆಂಡರ ರದ್ದುಪಡಿಸಿ ಇಡಿಗಂಟು ಹಣವನ್ನು ಸರಕಾರಕ್ಕೆ ಮುಟ್ಟಗೋಲು ಹಾಕುವುದಲ್ಲದೆ ಇದರಿಂದ ನೆಡುತೋಪು ನಾಶವಾದಲ್ಲಿ ಇಡೀ ನೆಡುತೋಪಿಗೆ ತಗುಲಿದ ವೆಚ್ಚವನ್ನು ಟೆಂಡರ್‌ದಾರರಿಂದ ವಸೂಲು ಮಾಡಲು ಕ್ರಮ ಜರುಗಿಸಲಾಗುವುದು ಹಾಗೂ ಮಂಜೂರಾದ ಅಂದಾಜು ಪತ್ರಿಕೆಯಲ್ಲಿ ಯಾವುದೇ ಕೆಲಸವು VBGRAMG (MGNREGA) ಯೋಜನೆಗೆ ಸಂಯೋಜನೆಗೊಂಡಲ್ಲಿ ಆ ಕೆಲಸ ಕಡಿಮೆಗೊಳಿಸಿ ಕಾಮಗಾರಿ ಕಾರ್ಯಾದೇಶ ನೀಡಲಾಗುವುದು.

15. ಯಶಸ್ವಿ ಟೆಂಡರದಾರರು ನಿಗದಿಪಡಿಸಿದ ಕೆಲಸಗಳನ್ನು ಯಾವುದೇ ಕಾರಣಕ್ಕಾಗಿ ಮಾಡಿ ಮುಗಿಸದೇ ಅಥವಾ ಕಳಪೆ ದರ್ಜೆಯ ಕೆಲಸ ಮಾಡಿದಲ್ಲಿ ಅಂತಹ ಗುತ್ತಿಗೆದಾರರ ಗುತ್ತಿಗೆಯನ್ನು ರದ್ದು ಪಡಿಸುವುದಲ್ಲದೇ ಕಪ್ಪು ಪಟ್ಟಿಯಲ್ಲಿ ಸೇರಿಸಲಾಗುವುದು. ಇಂತಹ ಪರಿಸ್ಥಿತಿಯಲ್ಲಿ ಮುಗಿಯದೆ ಉಳಿದ ಅಥವಾ ಪ್ರಾರಂಭಿಸದೆ ಇರುವಂತಹ ಕಾಮಗಾರಿಗಳನ್ನು ಟೆಂಡರುದಾರರ ಆರ್ಥಿಕ ಜವಾಬ್ದಾರಿಯಲ್ಲಿ ಟೆಂಡರನ್ನು ಹೊಸದಾಗಿ ಕರೆದು ಕೆಲಸ ಮಾಡಿಸಿ ಇಲಾಖೆಗೆ ಆರ್ಥಿಕ ನಷ್ಟ ಉಂಟಾದರೆ ಅಂತಹ ನಷ್ಟವನ್ನು ಮೂಲ ಯಶಸ್ವಿ ಟೆಂಡರದಾರರು ಭರಿಸಬೇಕಾಗುತ್ತದೆ.

16. ಈ ಮೇಲಿನ ಕ್ರಮದಿಂದ ಇಲಾಖೆಗೆ ಆಗಬಹುದಾದ ನಷ್ಟವನ್ನು ಮೂಲ ಯಶಸ್ವಿ ಟೆಂಡರದಾರರು ಭರಿಸಲು ವಿಫಲರಾದರೆ ಸದರಿ ಮೊತ್ತವನ್ನು ಕಂದಾಯದ ಬಾಕಿ ಎಂದು ವಸೂಲಿ ಮಾಡಲು ಕ್ರಮ ಕೈಕೊಳ್ಳಲಾಗುವುದು.

17. ಕಾಲ ಕಾಲಕ್ಕೆ ಮೇಲಾಧಿಕಾರಿಗಳು ಅಥವಾ ಸರಕಾರದ ನೀತಿ ನಿಯಮಗಳು ಅನುಸಾರವಾಗಿ ನೆಡುತೋಪು ನಿರ್ಮಿಸುವ ಹಾಗೂ ನಿರ್ವಹಿಸುವ ಕೆಲಸಗಳಲ್ಲಿ ಪ್ರಮಾಣದಲ್ಲಿ ಬದಲಾವಣೆ ಆದಲ್ಲಿ ಅಂತಹ ಬದಲಾವಣೆಗಳಿಗೆ ಹೊಂದಿಕೊಂಡು ಹೋಗುವ ನಿಭಂದನೆಗೆ ಒಳಪಟ್ಟಿರಬೇಕು.

18. ಅರಣ್ಯೀಕರಣ ಕಾಮಗಾರಿಗಳಿಗೆ ಇಲಾಖೆ ಅಧಿಕಾರಿಗಳು ಸ್ಥಳದಲ್ಲಿ ನೀಡುವ ನಿರ್ದೇಶನಗಳಿಗೆ ಒಳಪಟ್ಟಿರುತ್ತದೆ, ಮತ್ತು ಕಾಲಕಾಲಕ್ಕೆ ನಿರ್ದೇಶಿಸುವ ಕಾಮಗಾರಿಗಳನ್ನು ನಿರ್ವಹಿಸಬೇಕಾಗುತ್ತದೆ. ಹಾಗೂ

ಕಾಮಗಾರಿ ಪೂರ್ಣಗೊಂಡ ನಂತರ ಈ ಕೆಳಗೆ ಸಹಿ ಮಾಡಿದವರು ಅಥವಾ ಇಲಾಖೆಯ ಅಧಿಕಾರಿಗಳು ಪರಿಶೀಲಿಸಿ ಶೇಕಡಾ 90% ಸಸಿಗಳು ಬದುಕುಳಿದಲ್ಲಿ ಮಾತ್ರ ಅಂತಿಮ ಬಿಲ್ಲಿನ ಹಣ ಪಾವತಿಸಲಾಗುವುದು. ಒಂದು ವೇಳೆ ಪ್ರಮಾಣ ಕಡಿಮೆ ಬಂದಲ್ಲಿ ಅಂದಾಜು ಪತ್ರಿಕೆಯನುಸಾರ ಎಲ್ಲಾ ಕೆಲಸಗಳಲ್ಲಿ ಕಡಿಮೆ ಆದ ಪ್ರಮಾಣದ ಮೊತ್ತವನ್ನು ಕಡಿತಗೊಳಿಸಲಾಗುವುದು.

19. ಯಾವುದೇ ಅಪರಾಧ ಪ್ರಕರಣಗಳನ್ನು ಎದುರಿಸುತ್ತಿರುವ ಅಥವಾ ಶಿಕ್ಷೆಗೆ ಒಳಗಾದವರು ಟೆಂಡರ ಹಾಕಲು ಅರ್ಹರಿರುವುದಿಲ್ಲ. ಇಂತಹ ಟೆಂಡರ್‌ದಾರರಿಗೆ ಟೆಂಡರ್ ಮಂಜೂರಾಗಿದ್ದು ಸದರಿಯವರು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವುದು ಯಾವುದೇ ಹಂತದಲ್ಲಿ ತಿಳಿದು ಬಂದಲ್ಲಿ ಅಂತಹವರ ಟೆಂಡರ್‌ನ್ನು ವಜಾಮಾಡಲಾಗುವುದು.

20. ಟೆಂಡರ ಪ್ರಕ್ರಿಯೆಯನ್ನು ಯಾವುದೇ ಮೂನ್ಸೂಚನೆ ಇಲ್ಲದೆ ಮುಂದೂಡುವ, ರದ್ದುಗೊಳಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ವಿಭಾಗ, ವಿಜಯಪುರ ಇವರು ಹೊಂದಿರುತ್ತಾರೆ.

21. ಆಧ್ಯತೆಯ ಮೇರೆಗೆ ಅನುಕ್ರಮವಾಗಿ ಮಾಡಬೇಕಾಗಿರುವ ಕೆಲಸಗಳ ಪಟ್ಟಿ ಹಾಗೂ ಕರಡು ಅಂದಾಜು ಪಟ್ಟಿ ಈ ಕೆಳ ಸಹಿದಾರರ ಕಚೇರಿಯಲ್ಲಿ ಲಭ್ಯವಿದ್ದು, ಪರಿಶೀಲಿಸಲು ಪಡೆಯಬಹುದಾಗಿದೆ.

22. ಯಾವುದೇ ತಕರಾರಿನ ಬಗ್ಗೆ ಸಾಮಾಜಿಕ ಅರಣ್ಯ ವಿಭಾಗ, ವಿಜಯಪುರ ಉಪ ಅರಣ್ಯ ಸಂರಕ್ಷಣಾಧಿಕಾರಿಯವರಲ್ಲಿ ಮೇಲ್ಮನವಿ ಸಲ್ಲಿಸಬಹುದು. ಅವರ ಆದೇಶವು ಅಧೀನಾಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಪಾಲನಾರ್ಹವಾದುದು.

23. ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಆದೇಶದ ಬಗ್ಗೆ ತೃಪ್ತಿ ಇಲ್ಲವಾದರೆ ಅಂತಹ ಆದೇಶದ 30 ದಿನಗಳೊಳಗಾಗಿ ಬೆಳಗಾವಿ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಲ್ಲಿ ಮೇಲ್ಮನವಿ ಸಲ್ಲಿಸಬಹುದು ಹಾಗೂ ಅವರು ಕೊಡುವ ತೀರ್ಪು ಅಂತಿಮವಾದುದು.

24. ಟೆಂಡರ ಕುರಿತಾದ ನ್ಯಾಯಿಕ ವ್ಯಾಜ್ಯದ ಸಂದರ್ಭ ಉದ್ಭವಿಸಿದಲ್ಲಿ ವಿಜಯಪುರ ಸಿವಿಲ್ ನ್ಯಾಯಾಲಯ ವ್ಯಾಜ್ಯ ವ್ಯಾಪ್ತಿಯ ನ್ಯಾಯಾಲಯವಾಗಿರುತ್ತದೆ.

25. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಕರ್ನಾಟಕದ ಆದೇಶ, ಸುತ್ತೋಲೆ ಮತ್ತು ಮಾರ್ಗಸ್ರಂ ಅನುಸಾರ ಟೆಂಡರಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಿ ಅಂಗೀಕರಿಸಲಾಗುವದು ಅಥವಾ ತಿರಸ್ಕರಿಸಲಾಗುವದು.

26. ***ಸದರಿ ಕಾಮಗಾರಿಗಳಿಗೆ ಪ್ರಸಕ್ತ ಸಾಲಿನ ಘಟಕ ದರಕ್ಕೆ ಶೇಕಡ ಪ್ರತಿಶತ 10% ಏರಿಕೆ ಮಾಡಿ ಟೆಂಡರನ್ನು ಕರೆಯಲಾಗಿದ್ದು ಅದರಂತೆ ಕಾಮಗಾರಿಗಳನ್ನು ನಿರ್ವಹಿಸಲು ಬದ್ಧರಾಗಿರಬೇಕು.***

27. ಸಂಪರ್ಕ ಜಾಲವು ಸಿಗದೇ ಇದ್ದ ಪಕ್ಷದಲ್ಲಿ ಇಲಾಖೆ ಜವಾಬ್ದಾರರಾಗಿರುವುದಿಲ್ಲ.

28. ಕಾಮಗಾರಿಗಳಲ್ಲಿ ಅಥವಾ ಸ್ಥಳ ಬದಲಾವಣೆ ಆದಲ್ಲಿ ಬದಲಾವಣೆ ಆದ ಘಟಕ ದರಗಳಂತೆ ಅಂದಾಜು ಪತ್ರಿಕೆಗೆ ಮಂಜೂರಾತಿ ನೀಡಿದ ಅನುಸಾರ ಕಾರ್ಯದೇಶ ನೀಡಲಾಗುವುದು.

29. ***ಈ ಟೆಂಡರ್ ಪ್ರಕಟಣೆಯಲ್ಲಿ ನಮೂದಿಸಿರುವ ಕಾಮಗಾರಿಗಳು ಅನುದಾನ ಹಂಚಿಕೆ ಆಧಾರದ ಮೇಲೆ ಮತ್ತು ಕ್ರಿಯಾ ಯೋಜನೆಯ ಮಂಜೂರಾತಿ ನಿರೀಕ್ಷಣೆಯ ಮೇರೆಗೆ ಟೆಂಡರ್ ಕರೆಯಲಾಗಿದೆ. ಸದರಿ ಕಾಮಗಾರಿಗಳಲ್ಲಿ ಬದಲಾವಣೆ ಹಾಗೂ ಹೆಚ್ಚು/ಕಡಿಮೆ ಆದಲ್ಲಿ ಅದಕ್ಕನುಗುಣವಾಗಿ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಬದ್ಧರಾಗಿರಬೇಕು. ಈ ಕುರಿತು ಟೆಂಡರ್ ಹಾಕಿದ ನಂತರ ಅನುದಾನ ಮಂಜೂರಾತಿ ಆಗದೇ ಇದ್ದಲ್ಲಿ ಭರಿಸಿರುವ ಇ.ಎಮ್.ಡಿ. ಹಣಕ್ಕೆ ಯಾವುದೇ ಬಡ್ಡಿ ದರ ಪಾವತಿ ಮಾಡಲಾಗುವುದಿಲ್ಲ ಹಾಗೂ ಅಂದಾಜು ದರಗಳನ್ನು ನಮೂದಿಸಲಾಗಿದ್ದು, ನಿಖರವಾದ ಅಂದಾಜುಪಟ್ಟಿಯ ಮೊತ್ತ ಹೆಚ್ಚು/ಕಡಿಮೆ ಆದ ಮಂಜೂರಾತಿ ಮೊತ್ತಕ್ಕೆ ಕೆಲಸ ಕೈಗೊಳ್ಳಲು ಬದ್ಧರಾಗಿರಬೇಕು ಮತ್ತು ಮೇಲಾಧಿಕಾರಿಗಳ ನಿರ್ದೇಶನದ ಮೇರೆಗೆ ಅಗತ್ಯವಿದ್ದಲ್ಲಿ ಅಂದಾಜು ಪಟ್ಟಿಯನ್ನು ಹೊರತುಪಡಿಸಿ ಹೆಚ್ಚುವರಿ ಚಟುವಟಿಕೆಗಳನ್ನು ನಿರ್ವಹಿಸಬೇಕು ಅಂದರೆ, ಅಂದಾಜು ಪಟ್ಟಿಯಲ್ಲಿ ಸ್ಪಷ್ಟವಾಗಿ ಉಲ್ಲೇಖವಿಲ್ಲದ, ನೆಡುತೋಪಿಗೆ ಅವಶ್ಯವಿದ್ದ ಹಾಗೂ ಋತುಮಾನಕ್ಕೆ ತಕ್ಕಂತೆ***

***ನೆಡುತೋಪಿನ ಉಳಿವಿಗೆ ಅನುಕೂಲವಾಗುವಂತಹ ಕಾರ್ಯಚಟುವಟಿಕೆಯನ್ನು ನಿರ್ವಹಿಸುವ ಷರತ್ತಿಗೆ ಗುತ್ತಿಗೆದಾರರು ಭದ್ದರಾಗಿರಬೇಕು.***

30. ತಂತಿಬೇಲಿ ನಿರ್ಮಾಣ ಮಾಡುವ ಕೆಲಸಗಳಿಗೆ ಬೇಕಾಗುವ ಬಾರ್ಬೆಡ್ ವೈರಗಳನ್ನು ಇಲಾಖೆಯಿಂದ ದರಪಟ್ಟಿ ಮಂಜೂರು ಮಾಡಿದ ಯಶಸ್ವಿ ಟೆಂಡರುದಾರರು/ ಏಜನ್ಸಿ ಮುಖಾಂತರವೇ ಖರೀದಿ ಮಾಡಿ ಪೂರೈಸಲಾಗುವುದು ಆದ್ದರಿಂದ ಸದರಿ ಷರತ್ತಿಗೆ ಒಪ್ಪಿಗೆ ಇರಬೇಕು.

31. ಗುತ್ತಿಗೆದಾರರು ಸಿಬ್ಬಂದಿ/ಕೂಲಿ ಕಾರ್ಮಿಕರ ನಿಯೋಜನೆಗೆ ಸಂಬಂಧಿಸಿದಂತೆ ಕೆಳಕಂಡ ಶಾಸನಗಳಿಗೆ ಬಧ್ಧನಾಗಿದ್ದು ಅವುಗಳಲ್ಲಿ ನಮೂದಿಸ‌ಲಾಗಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

    i. Workman's Compensation Act 1923
    ii. Payment of wages Act 1935
    iii. Minimum wage act 1948
    iv. Child labour liability act 1938
    v. Employer's liability act 1938
    vi. Other acts of central & state that may applicable time to time.

32. ಹೆಚ್ಚುವರಿ ಟೆಂಡರ ನಿಬಂಧನೆಗಳು ಏನಾದರೂ ಮೇಲಾಧಿಕಾರಿಗಳಿಂದ ಸ್ವೀಕರಿಸಲ್ಪಟ್ಟಲ್ಲಿ ಹಾಗೂ ಈ ಕೆಳಗೆ ಸಹಿ ಮಾಡಿದವರಿಗೆ ಅವಶ್ಯಕತೆ ಅನ್ನಿಸಿದಲ್ಲಿ ಟೆಂಡರ್ ದಿನದಂದು ಅಥವಾ ಅದಕ್ಕಿಂತ ಮೊದಲು ಸೇರ್ಪಡಿಸಿ ಅಥವಾ ಮಾರ್ಪಡಿಸಿ ಪ್ರತ್ಯೇಕವಾಗಿ ಕಛೇರಿಗೆ ಸೂಚನಾಫಲಕದಲ್ಲಿ ಪ್ರಕಟಿಸಲಾಗುವುದು.

33. ಸದರಿ ಕಾಮಗಾರಿಗಳು ಅನುದಾನದ ನಿರೀಕ್ಷೆಯ ಮೇರೆಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅಂಗೀಕರಿಸುವ ಹಾಗೂ ರದ್ದುಗೊಳಿಸುವ ಪ್ರಾಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ವಿಭಾಗ, ವಿಜಯಪುರ ರವರು ಹೊಂದಿರುತ್ತಾರೆ.

34. As per the govt. notification no. FD 48 CSL 2017, Bangalore date 29-06-2017 forestry allied works are exempted from GST, KPPP portal works estimates are added with 18% GST But as per KFD datasheets GST amount is not provided due to exemption. Hence bidder has to bid for the estimated amount except GST.

ಸರ್ಕಾರದ ಅಧಿಸೂಚನೆ ಸಂಖ್ಯೆ FD 48 CSL 2017, ಬೆಂಗಳೂರು ದಿನಾಂಕ: 29-06-2017 ರ ಪ್ರಕಾರ ಅರಣ್ಯ ಸಂಬಂಧಿತ ಕೆಲಸಗಳನ್ನು GST ಯಿಂದ ವಿನಾಯಿತಿ ನೀಡಲಾಗಿದೆ, KPPP ಪೋರ್ಟಲ್ ಕೆಲಸಗಳ ಅಂದಾಜು ಪತ್ರಿಕೆಗಳಿಗೆ 18% GST ಸೇರ್ಪಡೆಯಾಗುತ್ತದೆ. ಆದರೆ, ಕರ್ನಾಟಕ ಅರಣ್ಯ ಇಲಾಖೆಯ ಡೇಟಾಶೀಟ್‌ಗಳ ಪ್ರಕಾರ GST ಯಿಂದ ವಿನಾಯಿತಿ ಇರುವುದರಿಂದ GST ಮೊತ್ತವನ್ನು ಒದಗಿಸಲಾಗಿಲ್ಲ. ಆದ್ದರಿಂದ ಬಿಡ್ ಸಲ್ಲಿಸುವವರು GST ಹೊರತುಪಡಿಸಿ ಅಂದಾಜು ಮೊತ್ತಕ್ಕೆ ಬಿಡ್ ಮಾಡಬೇಕು.

35. ಸದರಿ ಕಾಮಗಾರಿಗಳಿಗೆ ಬಿಡ್ ಸಲ್ಲಿಸುವವರು ಜಿಲ್ಲಾ ಪಂಚಾಯತ್, ವಿಜಯಪುರದಲ್ಲಿ VBGRAMG (MGNREGA) ಯೋಜನೆ ಅಡಿ ತಂತ್ರಾಂಶದಲ್ಲಿ ಕಡ್ಡಾಯವಾಗಿ ನೋಂದಣಿ ಹೊಂದಿರಬೇಕು. ನೋಂದಣಿ ಹೊಂದದೇ ಇದ್ದಲ್ಲಿ ಕೂಲಂಕುಷವಾಗಿ ಸದರಿ ಗುತ್ತಿಗೆದಾರರ ಬಿಡ್‌ನ್ನು ಮುಂಚಿತವಾಗಿ ತಿಳಿಸದೇ ತಿರಸ್ಕರಿಸಲಾಗಿವುದು.

**Tender Technical Qualification Criteria**

1. Minimum of successive five years of experience in civil engineering construction works and he should produce or enclose the experience certificate. Work done certificate should be produced from not below the rank of Deputy Conservator of Forests. Contractor should produce the work done certificate of at least 90% of contract value as a prime contractor at least one similar type of works such as a value of not less than 50% of estimated value of contract
2. Audited balance sheet for last two years (i.e. 2024-25, 2025-26) with IT returns statement.
3. Contract Registration Certificate as a Forest Contractor for Afforestattion works should be uploaded.
4. Technical qualification in forestry College or institution recognized by the State Government or Central Government.
5. PAN TIN and GST Numbers
6. I T Certificate

ಹೆಚ್ಚಿನ ವಿವರಗಳು ಬೇಕಾದಲ್ಲಿ ಕಛೇರಿ ವೇಳೆಯಲ್ಲಿ ಈ ಕಾರ್ಯಾಲಯದಿಂದ ಪಡೆಯಬಹುದು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ವಿಜಯಪುರ.